KARN020014232023

NIVEDITHA T M

Digitally signed by NIVEDITHA T M
Date: 2026.03.28 10:55:19 +0530

Presented on : 11-10-2023
Registered on : 12-10-2023
Decided on : 26-03-2026
Duration : 03 years, 05 months, 14 days

# 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ರಾಮನಗರ.

**:ಉಪಸ್ಥಿತರು :**

**ಶ್ರೀಮತಿ.ನಿವೇದಿತ.ಟಿ.ಎಂ.,** ಬಿಎ.ಎಲ್., ಎಲ್ಎಲ್.ಬಿ.,
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರಾಮನಗರ.**

## ಅಪರಾಧಿಕ ಪ್ರಕರಣ ಸಂಖ್ಯೆ: 108/2023

ದಿನಾಂಕ:**26** ನೇ ಮಾರ್ಚ, **2026**

ಪಿರ್ಯಾದುದಾರರು : ಕರ್ನಾಟಕ ಸರ್ಕಾರ,
ರಾಮನಗರ ಗ್ರಾಮಾಂತರ ಆರಕ್ಷಕ ಠಾಣೆ,
ರಾಮನಗರ ಜಿಲ್ಲೆ.

**(ಪ್ರತಿನಿಧಿಸುವವರು ಸ.ಸ.ಅಭಿಯೋಜಕರು)**

-ವಿರುದ್ಧ-

**ಆರೋಪಿತರು** : 1. ಶ್ರೀ.ಚಂದ್ರಶೇಖರ್,
ಬಿನ್ ವೀರಮಾದಯ್ಯ,
ವಯಸ್ಸು ಸುಮಾರು 69 ವರ್ಷಗಳು,

2. ಶ್ರೀ.ಪರಮಶಿವಯ್ಯ,
ಬಿನ್ ಚಂದ್ರಶೇಖರ್,
ವಯಸ್ಸು ಸುಮಾರು60 ವರ್ಷಗಳು,

3. ಶ್ರೀ.ಸತೀಶ್,

4. ಶ್ರೀ.ಉಮೇಶ,
ಬಿನ್ ಪರಮೇಶ,
ವಯಸ್ಸು ಸುಮಾರು 30 ವರ್ಷಗಳು,

5. ಶ್ರೀ.ಗಣೇಶ.ಕೆ,
ಬಿನ್ ಕಾಳಿಂಗರಾಜು,
ವಯಸ್ಸು ಸುಮಾರು 33 ವರ್ಷಗಳು,

6. ಸವಿತಾ,
ಬಿನ್ ರಾಜುಕುಮಾರ್,
ವಯಸ್ಸು ಸುಮಾರು 37 ವರ್ಷಗಳು,

7. ಪ್ರೇಮ,
ಚಂದ್ರಶೇಖರ್,
ವಯಸ್ಸು ಸುಮಾರು 60 ವರ್ಷಗಳು,

ಆರೋಪಿಗಳೆಲ್ಲಾರ ವಾಸಃ ಅಂಜನಪುರ ಗ್ರಾಮ,
ರಾಮನಗರ ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ.ಪಿಕೆ.,ವಕೀಲರು)

* * * * *

**:ತೀರ್ಪು:**

***(ಪ್ರಸಿದ್ಧಿ ಪಡಿಸಿದ ದಿನಾಂಕ: 26/03/2026)***

ಆರಕ್ಷಕ ಉಪನಿರೀಕ್ಷಕರು, ರಾಮನಗರ ಗ್ರಾಮಾಂತರ ಆರಕ್ಷಕ ಠಾಣೆ, ರಾಮನಗರ ಜಿಲ್ಲೆ ಇವರು ಆರೋಪಿ ಸಂಖ್ಯೆ.1 ರಿಂದ 7 ರವರುಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 323, 324, 326, 427, 504 ಮತ್ತು 506 ಸಹವಾಚಕ 149 ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಆರೋಪಿತರ ವಿರುದ್ಧ ಮಾಡಲಾದ ದೋಷಾರೋಪಣೆಯ ವಿವರ ಈ ಕೆಳಕಂಡಂತಿದೆ:

ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ ಸರಹದ್ದು ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಂಜನಾಪುರ ಗ್ರಾಮದಲ್ಲಿ ದಿನಾಂಕ: 01.03.2023 ರಂದು ರಾತ್ರಿ 11.45 ಗಂಟೆ ಸಮಯದಲ್ಲಿ ಸಾಕ್ಷಿ-6 ರವರಿಗೆ ಅವರ ತಾಯಿ ಚಿಕ್ಕ ಚಿನ್ನಮ್ಮ ರವರು ಅರಿಶಿನ ಕುಂಕುಮಕ್ಕಾಗಿ

ಬರೆದುಕೊಟ್ಟ 10 ಗುಂಟೆ ಜಮೀನಿನ ವಿಚಾರದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಸಾಕ್ಷಿ-1 ರಿಂದ 5 ರವರುಗಳಿಗೆ ಕೈಗಳಿಂದ ಹೊಡೆದಿದ್ದು, ಸಾಕ್ಷಿ-2 ರಿಂದ 4ರವರುಗಗಳಿಗೆ ಮುಂಡೇರಾ ಎಂದು ಬಾಯಿಗೆ ಬಂದಂತೆ ಬೈಯ್ದು, ಆರೋಪಿ ಸಂಖ್ಯೆ.1, 3 ಮತ್ತು 4 ರವರುಗಳು ದೊಣ್ಣೆಯಿಂದ ಸಾಕ್ಷಿ-1, 3 ಮತ್ತು 4 ರವರುಗಳ ಬಲಗೈಗೆ, ಎಡಗೈಗೆ, ತಲೆಗೆ ಹೊಡೆದು ಸಾಧಾರಣ ಮತ್ತು ತೀವ್ರ ಸ್ವರೂಪದ ರಕ್ತಗಾಯಗಳನ್ನುಂಟು ಮಾಡಿದ್ದು, ಆರೋಪಿ-2ರವರು ಸಾಕ್ಷಿ-2 ರವರಿಗೆ ಕುಡುಗೋಲಿನಿಂದ ತಲೆಯ ಎಡಭಾಗಕ್ಕೆ ಹೊಡೆದು ಸಾದಾರಣ ಸ್ವರೂಪವಾದ ರಕ್ತಗಾಯವನ್ನುಂಟು ಮಾಡಿದ್ದು, ಆರೋಪಿ-5 ರವರು ಹಿಡಿ ಗಾತ್ರದ ಕಲಿನಿಂದ ಸಾಕ್ಷಿ-4 ರವರ ತಲೆಗೆ ಹೊಡೆದು ಸಾಧಾರಣ ಸ್ವರೂಪವಾದ ರಕ್ತಗಾಯಗಳನ್ನುಂಟು ಮಾಡಿದ್ದು, ಆರೋಪಿತರು ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆ ಹಾಕಿ ನಂತರ ಮನೆಯ ಮುಂದೆ ನಿಂತಿದ್ದ ಸಾಕ್ಷಿ-8 ರವರ ಬಾಬ್ತು ಕೆಎ-06-ಪಿ-2341 ಕ್ವಿಡ್ ಕಾರನ್ನು ಎಲ್ಲ ಆರೋಪಿಗಳು ಸೇರಿ ಕಲ್ಲುಗಳಿಂದ, ದೊಣ್ಣೆಗಳಿಂದ ಗ್ಲಾಸ್ ಗಳು, ಬಾನೆಟ್, ಬಾಡಿ ಹೊಡೆದು, ಕುಡುಗೋಲಿನಿಂದ ಟೈರ್ ಗಳನ್ನು ಕುಯು

ಸಂಪೂರ್ಣ ಜಖಂಗೊಳಿಸಿ ಅಂದಾಜು ರೂ.65,000/- ರೂಗಳಷ್ಟು ನಷ್ಟವನ್ನುಂಟು ಮಾಡಿರುತ್ತಾರೆಂದು ಈ ಪ್ರಕರಣ ದಾಖಲಾಗಿರುತ್ತದೆ.

3. ಚಾಸಾ-1 ರವರ ಲಿಖಿತ ದೂರನ್ನು ಠಾಣಾಧಿಕಾರಿಯು ಸ್ವೀಕರಿಸಿದ್ದು, ಠಾಣಾ ಮೊಕದ್ದಮೆ ಸಂಖ್ಯೆ:64/2023 ಭಾರತೀಯ ದಂಡ ಸಂಹಿತೆ ಕಲಂ.143, 147, 323, 324, 427, 504 ಮತ್ತು 506 ಸಹವಾಚಕ 149 ರಂತೆ ಆರೋಪಿತರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೂ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಯು ಪ್ರಕರಣವನ್ನು ಕೈಗೆತ್ತಿಕೊಂಡು ಸಮಗ್ರವಾಗಿ ಪರಿಶೀಲನೆ ಮಾಡಿದ್ದು, ಭಾರತೀಯ ದಂಡ ಸಂಹಿತೆ ಕಲಂ.143, 323, 324, 326, 427, 504 ಮತ್ತು 506 ಸಹವಾಚಕ 149 ರಂತೆ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ಆರೋಪಿತರ ವಿರುದ್ಧ ಅಗತ್ಯ ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.143, 323, 324, 326, 427, 504 ಮತ್ತು 506 ಸಹವಾಚಕ 149 ರಡಿಯಲ್ಲಿ ಆರೋಪಿತರಿಗೆ ಸಂಜ್ಞತೆಯನ್ನು ತೆಗೆದುಕೊಂಡಿದ್ದು,

ಅವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಲಾಗಿರುತ್ತದೆ.

5. ಆರೋಪಿತರಿಗೆ ನ್ಯಾಯಾಲಯವು ಜಾಮೀನಿನ ಮೇಲೆ ಬಿಡುಗಡೆಯನ್ನು ಮಾಡಿದ್ದು, ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಂತೆ ದೋಷಾರೋಪಣಾ ಪಟ್ಟಿಯ ಪ್ರತಿಗಳನ್ನು ಪೂರೈಕೆ ಮಾಡಿದೆ.

6. ಮುಂದುವರೆದು, ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿತರ ಪರ ವಕೀಲರ ವಾದ ಮತ್ತು ವಿವಾದಗಳನ್ನು ಆಲಿಸಲಾಯಿತು. ಆರೋಪಿತರ ವಿರುದ್ಧ ನ್ಯಾಯಾಲಯದ ಮುಂದೆ ಸಾಕಷ್ಟು ದಾಖಲಾತಿಗಳು ದೊರೆತಿದ್ದು, ಆರೋಪಿತರಿಗೆ ಭಾರತೀಯ ದಂಡ ಸಂಹಿತೆ ಕಲಂ.143, 323, 324, 326, 427, 504 ಮತ್ತು 506 ಸಹವಾಚಕ 149 ರಂತೆ ದೋಷಾರೋಪಣೆಯನ್ನು ರಚಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿದ್ದು, ಅವರು ತಾವುಗಳು ಯಾವುದೇ ತಪ್ಪನ್ನೆಸಗಿರುವುದಿಲ್ಲವೆಂದು ಹಾಗೂ ಸಾಕ್ಷ್ಯಗಳ ವಿಚಾರಣೆಯಾಗಬೇಕೆಂದು ಕೋರಿದ್ದು, ಪ್ರಕರಣವು ಸಾಕ್ಷ್ಯ ವಿಚಾರಣೆಗಾಗಿ ಮುಂದೂಡಲಾಯಿತು.

7. ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಮಾಡಲಾದ

ದೋಷಾರೋಪಣೆಯನ್ನು ರುಜುವಾತುಪಡಿಸುವ ಸಲುವಾಗಿ ಮತ್ತು ಅಪರಾಧವನ್ನು ಸಾಬೀತುಪಡಿಸಲು ಅಭಿಯೋಜನೆಯು ತನ್ನ ಪರವಾಗಿ ನಾಲ್ವರು ಸಾಕ್ಷಿದಾರರನ್ನು ಅಸಾ-1 ರಿಂದ ಅಸಾ-4 ವಿಚಾರಣೆ ಮಾಡಿ ಒಟ್ಟು 5 ದಾಖಲೆಗಳನ್ನು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಿಕೊಂಡಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಇನ್ನುಳಿದ ಸಾಕ್ಷಿದಾರರಿಗೆ ಸಮನ್ಸ್ ಜಾರಿ ಮಾಡಲು ಕೇಳಿಕೊಂಡಿದ್ದು, ಅಸಾ-1 ರಿಂದ ಅಸಾ-4 ರವರುಗಳು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದರಿಂದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಇನ್ನುಳಿದ ಸಾಕ್ಷಿದಾರರರಿಗೆ ಸಮನ್ಸ ಜಾರಿ ಮಾಡುವಂತೆ ಮನವಿಯನ್ನು ಮಾಡಿದ್ದು, ಸದರಿ ಮನವಿಯನ್ನು ತಿರಸ್ಕರಿಸಿ ಅಭಿಯೋಜನಾ ಪರ ಸಾಕ್ಷಿಯನ್ನು ಮುಕ್ತಾಯಗೊಳಿಸಲಾಯಿತು.

8. ಈ ಪ್ರಕರಣದ ಸಾಕ್ಷಿದಾರರು ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದರಿಂದ ಆರೋಪಿಯ ಮೇಲಿದ್ದ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಹೇಳಿಕೆಯನ್ನು ಕೈಬಿಡಲಾಯಿತು.

9. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಮುಂದೆ

ಹಾಜರುಪಡಿಸಲಾಗಿರುವ ಸಾಕ್ಷ್ಯಾಧಾರಗಳನ್ನು ಪರಾಮರ್ಶಿಸಿದ್ದು, ಈ ಕೆಳಕಂಡಂತೆ ಅಂಶಗಳು ಉದ್ಭವಿಸಿರುತ್ತವೆ.

**:ಅಂಶಗಳು :**

1) ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ ಸರಹದ್ದು ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಂಜನಾಪುರ ಗ್ರಾಮದಲ್ಲಿ ದಿನಾಂಕ: 01.03.2023 ರಂದು ರಾತ್ರಿ 11.45 ಗಂಟೆ ಸಮಯದಲ್ಲಿ ಸಾಕ್ಷಿ-6 ರವರಿಗೆ ಅವರ ತಾಯಿ ಚಿಕ್ಕ ಚಿನ್ನಮ್ಮ ರವರು ಅರಿಶಿನ ಕುಂಕುಮಕ್ಕಾಗಿ ಬರೆದುಕೊಟ್ಟ 10 ಗುಂಟೆ ಜಮೀನಿನ ವಿಚಾರದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದಿದ್ದು, ಇದು ಭಾ.ದಂ.ಸಂ.ಕಲಂ.143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆಯೇ?

2) ಮೇಲ್ಕಂಡ ದಿನ ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರುಗಳು ಅಪರಾಧವೆಸಗಬೇಕೆಂಬ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದಿದ್ದು, ಆರೋಪಿತರು ಸಾಕ್ಷಿ-1 ರಿಂದ 5 ರವರುಗಳಿಗೆ ಕೈಗಳಿಂದ ಹೊಡೆದಿದ್ದು, ಇದು ಭಾ.ದಂ.ಸಂ.ಕಲಂ.323 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆಯೇ?

3) ಮೇಲ್ಕಂಡ ದಿನ ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರುಗಳು ಅಪರಾಧವೆಸಗಬೇಕೆಂಬ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದಿದ್ದು, ಆರೋಪಿತರು ಸಾಕ್ಷಿ-2 ರಿಂದ 4 ರವರುಗಗಳಿಗೆ ಮುಂಡೇರಾ ಎಂದು ಬಾಯಿಗೆ ಬಂದಂತೆ ಬೈದಿದ್ದು, ಇದು ಭಾ.ದಂ.ಸಂ.ಕಲಂ.506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆಯೇ?

4) ಮೇಲ್ಕಂಡ ದಿನ ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರುಗಳು ಅಪರಾಧವೆಸಗಬೇಕೆಂಬ ಏಕೋದ್ದೇಶದಿಂದ ಬಂದಿದ್ದು, ಆರೋಪಿ ಸಂಖ್ಯೆ.1, 3 ಮತ್ತು 4 ರವರುಗಳು ದೊಣ್ಣೆಯಿಂದ ಸಾಕ್ಷಿ-1, 3 ಮತ್ತು 4 ರವರುಗಳ ಬಲಗೈಗೆ, ಎಡಗೈಗೆ, ತಲೆಗೆ ಹೊಡೆದು ಸಾಧಾರಣ ಮತ್ತು ತೀವ್ರ ಸ್ವರೂಪದ ರಕ್ತಗಾಯಗಳನ್ನುಂಟು ಮಾಡಿದ್ದು, ಆರೋಪಿ-2 ರವರು ಸಾಕ್ಷಿ-2 ರವರಿಗೆ ಕುಡುಗೋಲಿನಿಂದ ತಲೆಯ ಎಡಭಾಗಕ್ಕೆ ಹೊಡೆದು ಸಾದಾರಣ ಸ್ವರೂಪವಾದ ರಕ್ತಗಾಯವನ್ನುಂಟು ಮಾಡಿದ್ದು, ಆರೋಪಿ-5 ರವರು ಹಿಡಿ ಗಾತ್ರದ ಕಲಿನಿಂದ ಸಾಕ್ಷಿ-4 ರವರ ತಲೆಗೆ ಹೊಡೆದು ಸಾಧಾರಣ ಸ್ವರೂಪವಾದ ರಕ್ತಗಾಯಗಳನ್ನುಂಟು ಮಾಡಿದ್ದು, ಇದು ಭಾ.ದಂ.ಸಂ.ಕಲಂ.324 ಮತ್ತು 326 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆಯೇ?

5) ಮೇಲ್ಕಂಡ ದಿನ ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರುಗಳು ಅಪರಾಧವೆಸಗಬೇಕೆಂಬ ಏಕೋದ್ದೇಶದಿಂದ ಬಂದಿದ್ದು, ಆರೋಪಿತರು ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು, ಇದು ಭಾ.ದಂ.ಸಂ.ಕಲಂ.506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆಯೇ?

6) ಮೇಲ್ಕಂಡ ದಿನ ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿ ಸಂಖ್ಯೆ.1 ರಿಂದ 7 ರವರುಗಳು ಅಪರಾಧವೆಸಗಬೇಕೆಂಬ ಏಕೋದ್ದೇಶದಿಂದ ಬಂದಿದ್ದು, ಆರೋಪಿತರೆಲ್ಲಾರು ಮನೆಯ ಮುಂದೆ ನಿಂತಿದ್ದ ಸಾಕ್ಷಿ-8 ರವರ ಬಾಬ್ತು ಕೆಎ-06-ಪಿ-2341 ಕ್ವಿಡ್ ಕಾರನ್ನು ಎಲ್ಲ ಆರೋಪಿಗಳು ಸೇರಿ ಕಲ್ಲುಗಳಿಂದ, ದೊಣ್ಣೆಗಳಿಂದ ಗ್ಲಾಸ್ ಗಳು, ಬಾನೆಟ್, ಬಾಡಿ ಹೊಡೆದು, ಕುಡುಗೋಲಿನಿಂದ ಟೈರ್ ಗಳನ್ನು ಕುಯು ಸಂಪೂರ್ಣ ಜಖಂಗೊಳಿಸಿ ಅಂದಾಜು ರೂ.65,000/- ರೂಗಳಷ್ಟು ನಷ್ಟವನ್ನುಂಟು ಮಾಡಿದ್ದು, ಇದು ಭಾ.ದಂ.ಸಂ.ಕಲಂ.427 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆಯೇ?

7) ಯಾವ ಆದೇಶ?

10. ಈ ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿವೆಃ

**ಅಂಶ.1 ರಿಂದ 6** : *ನಕಾರಾತ್ಮಕವಾಗಿ;*

**ಅಂಶ.7** : *ಅಂತಿಮ ಆದೇಶದಂತೆ*
*ಈ ಕೆಳಕಂಡ ಕಾರಣಗಳಿಗಾಗಿ;*

## **: ಕಾರಣಗಳು :**

11. **ಅಂಶ 1 ರಿಂದ 7**:-ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸಲು ಅಂಶ ಸಂಖ್ಯೆ.1 ರಿಂದ 7 ನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

ಆರೋಪಿಯು ಭಾ.ದಂ.ಸಂ.ಕಲಂ.143, 427, 323, 324, 326, 504 ಮತ್ತು 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು ತನ್ನ ಪರವಾಗಿ ನಾಲ್ಕು ಸಾಕ್ಷಿದಾರರನ್ನು ಅಸಾ-1 ಪಿರ್ಯಾದಿ ವ ಗಾಯಾಳು ಸಾಕ್ಷಿದಾರರು, ಅಸಾ-2 ರಿಂದ ಅಸಾ-4 ರವರು ಪ್ರತ್ಯಕ್ಷ ವ ಗಾಯಾಳು ಸಾಕ್ಷಿದಾರರಿದ್ದು, ಅಭಿಯೋಜನೆಯು ತನ್ನ ಪರವಾಗಿ ಒಟ್ಟು 5 ದಾಖಲೆಯನ್ನು ನಿಪಿ-1 ದೂರು, ನಿಪಿ-2 ರಿಂದ ನಿಪಿ-5 ಸಾಕ್ಷಿದಾರರ ಹೇಳಿಕೆ ಎಂದು ಗುರುತಿಸಿಕೊಂಡಿರುತ್ತಾರೆ.

12. ಅಭಿಯೋಜನೆಯು ಅಸಾ-1 ರವರು ಪಿರ್ಯಾದಿ ವ ಗಾಯಾಳು ಸಾಕ್ಷಿಯನ್ನು ಅಸಾ-

1 ಎಂದು ವಿಚಾರಣೆಗೊಳಪಡಿಸಿದ್ದು, ಮುಖ್ಯವಿಚಾರಣೆಯಲ್ಲಿ ಸಾಕ್ಷಿಯು ಆರೋಪಿತರು ಸಂಬಂಧಿಕರಾಬೇಕು. ಆರೋಪಿಗಳಿಗೂ ಮತ್ತು ತಮಗೂ ಸಣ್ಣ ಪುಟ್ಟ ವಿಚಾರಕ್ಕೆ ಗಲಾಟೆಯಾಗಿದ್ದು, ಆ ಸಮಯದಲ್ಲಿ ಠಾಣೆಗೆ ಹೋದಾಗ ದೂರಿಗೆ ಸಹಿ ಮಾಡಿದ್ದು, ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ಯನ್ನು ನಿಪಿ-1(ಎ) ಎಂದು ಗುರುತಿಸಿಕೊಂಡಿದ್ದು ಹಾಗೂ ಸಾಕ್ಷಿಯು ಯಾವುದೇ ಮರು ಹೇಳಿಕೆಯನ್ನು ಪೊಲೀಸರಿಗೆ ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಮುಂದುವರೆದು ಅಭಿಯೋಜನೆಯು ಅಸಾ-2 ರಿಂದ ಅಸಾ-4 ರವರುಗಳು ಪ್ರತ್ಯಕ್ಷವ ಗಾಯಾಳು ಸಾಕ್ಷಿದಾರರಾಗಿ ವಿಚಾರಣೆಗೊಳಪಡಿಸಿದ್ದು, ಮುಖ್ಯವಿಚಾರಣೆಯಲ್ಲಿ ಸಾಕ್ಷಿದಾರರು ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು ಮತ್ತು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಅಭಿಯೋಜನೆಯ ಪರ ಲಭ್ಯವಿದ್ದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಿ ನೋಡಿದಾಗ ಅಸಾ-1 ರಿಂದ ಅಸಾ-4 ರವರಗಳು ಪ್ರಕರಣದ ಪ್ರಮುಖ

ಪಿರ್ಯಾದಿ, ಗಾಯಾಳು ವ ಪಂಚನಾಮೆ ಸಾಕ್ಷಿದಾರರಿದ್ದು, ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು, ಸದರಿ ಸಾಕ್ಷಿದಾರರಿಗೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಸಹಾಯವಾಗುವಂತಹ ಯಾವುದೇ ಅಂಶಗಳು ಹೊರಬಂದಿರುವುದಿಲ್ಲ. ಇನ್ನುಳಿದ ಸಾಕ್ಷಿದಾರರುಗಳಿಗೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ವಿಚಾರಣೆ ಮಾಡಲು ಸಮನ್ಸ ಜಾರಿ ಕೇಳಿಕೊಂಡಿದ್ದು, ಸದರಿ ಪ್ರಕರಣದಲ್ಲಿ ಅಸಾ-1 ರಿಂದ ಅಸಾ-4 ರವರುಗಳು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದರಿಂದ ಅವರ ಮನವಿಯನ್ನು ತಿರಸ್ಕರಿಸಲಾಯಿತು. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಈ ಕೆಳಗಿನ ತೀರ್ಪಿನಲ್ಲಿ ತಿಳಿಸಿರುವಂತೆ:

> *Hon'ble Supreme Court in 1996 (3) Crimes 84 Sathish Mehra V/s Delhi Administration & another: wherein at page No.13 the Hon'ble Apex Court held as follows:*
>
> *"When the judge is fairly certain that there is no prospect of the case ending in conviction the valuable time of the court should not be wasted for holding trial the purpose of formally completing the procedure to pronounce the conclusion on the future date".*

ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವಂತಹ ತತ್ವವು ಈ ಪ್ರಕರಣಕ್ಕೆ ಅನ್ವಯವಾಗುವ ಕಾರಣ ಪ್ರಕರಣದ ಪ್ರಮುಖ ಸಾಕ್ಷ್ಯಗಳು ಅಭಿಯೋಜನೆಗೆ ಪುಷ್ಟೀಕರಿಸಲು ಸಹಕಾರಿಯಾಗುವಂತಹ ಯಾವುದೇ ನುಡಿ ಸಾಕ್ಷ್ಯಗಳು ನುಡಿದಿಲ್ಲದವಾದ್ದರಿಂದ ಆರೋಪಿ ಸಂಖ್ಯೆ.1 ರಿಂದ 7 ರವರುಗಳ ವಿರುದ್ಧ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ ಭಾ.ದಂ.ಸಂ.ಕಲಂ. 143, 323, 324, 326, 427, 504 ಮತ್ತು 506 ಸಹವಾಚಕ 149 ರಡಿಯಲ್ಲಿ ಆರೋಪಿಯು ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆಂದು ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದ್ದರಿಂದ **ಅಂಶ ಸಂಖ್ಯೆ.1 ರಿಂದ 6 ನ್ನು ನಕಾರಾತ್ಮಕ ಎಂದು ಉತ್ತರಿಸುತ್ತೇನೆ.**

15. <u>ಅಂಶ ಸಂಖ್ಯೆ.**7:-**</u> **ಈ ಮೇಲ್ಕಂಡ ಚರ್ಚೆಗಳ ಆಧಾರದಂತೆ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.**

## <u>ಆದೇಶ</u>

ಅಪರಾಧಿಕ ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಂತೆ ಪ್ರದತ್ತವಾದ ಅಧಿಕಾರದಂತೆ ಆರೋಪಿ ಸಂಖ್ಯೆ.1 ರಿಂದ 7 ರವರುಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.

143, 323, 324, 326, 427, 504 ಮತ್ತು 506 ಸಹವಾಚಕ 149 ರಡಿಯಲ್ಲಿ ದಾಖಲಾದ ಆರೋಪಗಳಿಂದ ಆರೋಪಿ ಸಂಖ್ಯೆ.1 ರಿಂದ 7 ರವರುಗಳನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಸಂಖ್ಯೆ.1 ರಿಂದ 7 ರವರುಗಳು ಬರೆದು ಕೊಟ್ಟ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ರದ್ದುಗೊಳಿಸಿದೆ.

ಮುಂದುವರೆದು, ಮಾಲು ಪಟ್ಟಿ ಸಂಖ್ಯೆ: 45/2023ರಲ್ಲಿ ನಮೂದು ಮಾಡಿರುವ ಒಂದು ಮರದ ಹಿಡಿಕೆ ಇರುವ ಕಬ್ಬಿಣದ 1 1/4 ಅಡಿ ಉದ್ದವಿರುವ ಒಂದು ಕುಡುಗೋಲು, 2 1/2 ಉದ್ದದ ನೀಲಗಿರಿ ದೊಣ್ಣೆ ಮತ್ತು ಒಂದು ಹಿಡಿ ಗಾತ್ರದ ಕಾಡು ಜಾತಿಯ ಕಲ್ಲು ಬೆಲೆ ಬಾಳುವ ವಸ್ತುವಾವಗಿಲ್ಲವಾದ್ದರಿಂದ ಮೇಲ್ಮನವಿಯ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಮೇಲಿನ ಆದೇಶವನ್ನು ಶೀಘ್ರಲಿಪಿಗಾರರಿಂದ ಭಾಗಶಃ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಂತರ ಓದಿ ತಿದ್ದುಪಡಿ ಮಾಡಿ ಸಹಿ ಮಾಡಿ ಇಂದು ದಿನಾಂಕ:**26**ನೇ ಮಾರ್ಚ **2026** ರಂದು ತೆರೆದ ನ್ಯಾಯಾಲಯದಲ್ಲಿ ಪ್ರಸಿದ್ಧಿಪಡಿಸಲಾಯಿತು).

**(ಶ್ರೀಮತಿ. ನಿವೇದಿತ. ಟಿ. ಎಂ)**

**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ರಾಮನಗರ.

## **ಅನುಬಂಧ**

**ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ**:

ಅ.ಸಾ-1 : ಶ್ರೀ.ನಂದೀಶ;

ಅ.ಸಾ-2 : ಶ್ರೀಮತಿ.ಆಶಾ;

ಅ.ಸಾ-3 : ಶ್ರೀಮತಿ.ಕವಿತಾ;

ಅ.ಸಾ-4 : ಶ್ರೀಮತಿ.ಉಷಾ.

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ** :

ನಿ.ಪಿ-1 : ದೂರು;

ನಿ.ಪಿ-2 : ಅಸಾ-2 ರವರ ಹೇಳಿಕೆ ;

ನಿ.ಪಿ-3 : ಅಸಾ-3 ರವರ ಹೇಳಿಕೆ ;

ನಿ.ಪಿ-4 : ಅಸಾ-4 ರವರ ಹೇಳಿಕೆ ;

ನಿ.ಪಿ-5 : ಅಸಾ-5 ರವರ ಹೇಳಿಕೆ ;

**ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ**:

-- ಇಲ್ಲ --

**ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ** :

-- ಇಲ್ಲ --

**ಅಭಿಯೋಜನೆಯು ಪರ ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿ**

-- ಇಲ್ಲ --

**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ರಾಮನಗರ.